Presented on : 29-10-2022
Registered on : 29-10-2022
Decided on : 15-04-2026
Duration :3 years, 5 months, 17 days.

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರಗಿ.**

**ದಿನಾಂಕ : 15 ನೇ ಏಪ್ರಿಲ್ ಮಾಹೆಯ 2026.**

ಉಪಸ್ಥಿತರುಃ ಶ್ರೀಮತಿ ತಯ್ಯಬಾ ಸುಲ್ತಾನಾ. ಬಿ.ಎ.ಎಲ್.ಎಲ್.ಬಿ,
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು, ಜೇವರಗಿ.

**ಅಪರಾಧಿಕ ಪ್ರಕರಣ ಸಂಖ್ಯೆಃ 369/2022**

ಫಿರ್ಯಾಧಿದಾರರು :

ರಾಜ್ಯ ಸರ್ಕಾರದ ಪರ ಜೇವರಗಿ ಪೊಲೀಸ ಠಾಣೆ,

(ಪರ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿತರ ಹೆಸರು:

1. ರಮೇಶ ತಂದೆ ದತ್ತಪ್ಪಾ ತೇಲ್ಲೂರ,
   ವಯಸ್ಸುಃ 24 ವರ್ಷ, ಉಃ ಕೂಲಿ ಕೆಲಸ,
   ಸಾಃ ತೇಲ್ಲೂರ, ತಾಃ ಅಫಜಲಪೂರ,
   ಜಿಃ ಕಲಬುರಗಿ.

2. ಶಿವರಾಜ ತಂದೆ ಬಸಯ್ಯ ಗುತ್ತೇದಾರ,
   ವಯಸ್ಸುಃ 32 ವರ್ಷ, ಉಃ ಕೂಲಿ,
   ಸಾಃ ಓಂ ನಗರ, ತಾಃ ಜೇವರಗಿ,
   ಜಿಃ ಕಲಬುರಗಿ.

( ಆರೋಪಿತರ ಪರ ಶ್ರೀ ಎಸ್. ಬಿ. ವೈ., ವಕೀಲರು)

**ತೀರ್ಪು**

1. ಆರಕ್ಷಕ ಉಪ ನಿರೀಕ್ಷಕರು, ಜೇವರಗಿ ಪೊಲೀಸ ಠಾಣೆ, ಆರೋಪಿತರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇದೆಃ**

ಜೇವರ್ಗಿ ಪೊಲೀಸ್ ಠಾಣೆಯ ಸರಹದ್ದಿಯ ಜೇವರಗಿ ಜೇವರ್ಗಿ ಪಟ್ಟಣದ ರದ್ದೇವಾಡಿ ಪೆಟ್ರೋಲ ಪಂಪ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ ದಿನಾಂಕ 18-03-2022 ರಂದು 02.00 ಎ.ಎಂ. ಗಂಟೆಯ ಸಮಯಕ್ಕೆ ಆರೋಪಿತನು 1ನೇದ್ದವನು ಯಾವುದೇ ಅದೀಕೃತವಾಗಿ ಪರವಾನಿಗೆ ಇಲ್ಲದೆ 48 ಓರಿಜೀನಲ್ ಚ್ವಾಯಿಸ್ ವಿಸ್ಕಿ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ Original Choice Delexe Whisky ಅಂತಾ ಮತ್ತು ಅದರ ಪ್ರಮಾಣ 90 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.35.00 ಇರುತ್ತದೆ, 40 ಓರಿಜೀನಲ್ ಚ್ವಾಯಿಸ್ ವಿಸ್ಕಿ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ Original Choice Delexe Whisky ಅಂತಾ ಮತ್ತು ಅದರ ಪ್ರಮಾಣ 180 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.70.00 ಇರುತ್ತದೆ, 52 ಬ್ಯಾಗಪೇಪರ್ ವಿಸ್ಕಿ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ Bagpiper Delex Whisky ಅಂತಾ ಮತ್ತು ಅದರ ಪ್ರಮಾಣ 90 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ

ತುಂಬಿದ ಪೌಚಿನ ಬೆಲೆ ರೂ.68.00 ಇರುತ್ತದೆ, 30 ಬ್ಯಾಗಪೇಪರ್ ವಿಸ್ಕಿ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ Bagpiper Delex Whisky ಅಂತಾ ಮತ್ತು ಅದರ ಪ್ರಮಾಣ 180 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.106.00 ಇರುತ್ತದೆ, 40 ಎಮ್.ಸಿ. ಡುವೇಲ್ಸ ರಮ್ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ MC Dowells No.01, Rum ಅಂತಾ ಮತ್ತು ಅದರ ಪ್ರಮಾಣ 180 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.106.00 ಇರುತ್ತದೆ, 20 ಎಮ್.ಸಿ. ಡುವೇಲ್ಸ ವಿಸ್ಕಿ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ MC Dowells No.01, Reserve Whishky Orginal ಅಂತಾ ಮತ್ತು ಅದರ ಪ್ರಮಾಣ 180 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.198.00 ಇರುತ್ತದೆ, 20 ಕಿಂಗ್ ಫೀಷರ್ ಸ್ಟ್ರಾಂಗ ಪ್ರೀಮಿಯಮ್ ಬೀಯರ್ ಮದ್ಯ ತುಂಬಿದ ಟಿನ್ನಗಳು ಇದ್ದು, ಪ್ರತಿಯೊಂದು ಬೀಯರ ಟೀನ ಮೇಲೆ ಇಂಗ್ಲೀಷನಲ್ಲಿ King Fisher Strong Premium Beer ಅಂತಾ ಮತ್ತು ಅದರ ಪ್ರಮಾಣ 500 ಎಮ್.ಎಲ್ ಅಂತಾ ಬರೆದಿದ್ದು, ಪ್ರತಿಯೊಂದ ಮದ್ಯ ತುಂಬಿದ ಬಾಟಲಿ ಬೆಲೆ ರೂ.198-00 ಮಧ್ಯವನ್ನು ಅನಧೀಕೃತವಾಗಿ ಮಾರಾಟ ಮಾಡುತ್ತಿದ್ದಾಗ ಚಾಸಾ.1, 3 ಮತ್ತು 4 ನೇದ್ದವರು ಚಾಸಾ.2 ಮತ್ತು 3 ನೇದ್ದವರ ಸಮಕ್ಷಮದಲ್ಲಿ ದಾಳಿ ಮಾಡಿ ಒಟ್ಟು 23,356/- ಕಿಮ್ಮತ್ತಿನ ಮಧ್ಯ ಜಪ್ತಿ ಪಡಿಸಿಕೊಂಡಿದ್ದು ಇರುತ್ತದೆ. 1 ನೇ ಆರೋಪಿಯ ಮಧ್ಯದ ಪೌಚಗಳನ್ನು 2 ನೇ ಆರೋಪಿಯು ತೆಗೆದುಕೊಂಡು ಬಂದು ಮಾರಾಟ ಮಾಡುತ್ತಿದ್ದ ಬಗ್ಗೆ ತನಿಖೆಯಿಂದು ಕಂಡುಬಂದಿದ್ದು ಇರುತ್ತದೆ, ಕಾರಣ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರ

ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಚಾಸಾ.1 ರವರು ಆರೋಪಿತರ ವಿರುದ್ದ ನೀಡಿದ ಫಿರ್ಯಾದಿ ವರದಿ ಅನ್ವಯ ಜೇವರಗಿ ಪೊಲೀಸರು ತನಿಖೆಯನ್ನು ಕೈಗೊಂಡು ಆರೋಪಿತರ ವಿರುದ್ದ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣಾ ಪತ್ರವನ್ನು ಪರಿಶೀಲಿಸಿ ನ್ಯಾಯಾಲಯವು ಆರೋಪಿತರ ವಿರುದ್ಧ ಮೇಲ್ಕಂಡ ಅಪರಾಧಗಳಿಗೆ ಸಂಜ್ಞೆತೆಯನ್ನು ತೆಗೆದುಕೊಂಡಿದ್ದು, ಆರೋಪಿತರ ಹಾಜರಾತಿ ಪಡೆದು, ದೋಷಾರೋಪಣ ಪತ್ರದ ನಕಲನ್ನು ಆರೋಪಿತರಿಗೆ ಒದಗಿಸಿ, ದಂ. ಪ್ರ. ಸಂ. ಕಲಂಃ 207 ರ ಷರತ್ತನ್ನು ಪಾಲನೆ ಮಾಡಲಾಯಿತು. ಆರೋಪಿತರಿಗೆ ಆಪಾದನೆಗಳನ್ನು ರಚಿಸಿ ಓದಿ ಹೇಳಿದಾಗ, ಆರೋಪಿತರು ತಾವು ತಪ್ಪು ಮಾಡಿರುವುದಿಲ್ಲ ವಿಚಾರಣೆಯಾಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾರೆ.

4. ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವ ಅಪರಾದವನ್ನು ಆರೋಪಿತರು ಮಾಡಿರುತ್ತಾರೆಂದು ಸಾಬೀತುಪಡಿಸಲು ಅಭಿಯೋಜನೆಯು ಒಟ್ಟು 8 ಜನ ಸಾಕ್ಷಿದಾರರಲ್ಲಿ 4 ಜನ ಸಾಕ್ಷಿದಾರರನ್ನು ಫ್ರಾಸಾ-1 ರಿಂದ ಫ್ರಾಸಾ-4 ಎಂದು ವಿಚಾರಣೆಗೆ ಒಳಪಡಿಸಿ, 3 ದಾಖಲೆಗಳನ್ನು ನಿಪಿ-1 ರಿಂದ ನಿಪಿ-3 ಎಂದು ನಿಶಾನೆಕರಿಸಿಕೊಂಡಿದೆ ಹಾಗೂ ಮುದ್ದೆ ಮಾಲುಗಳನ್ನು ಮು.ಮಾ.1 ರಿಂದ 250 ರಂತೆ ವಶಪಡಿಸಿಕೊಂಡಿರುತ್ತಾರೆ.

5. ದಂ.ಪ್ರ.ಸಂ.ಕಲಂ.313 ರನ್ವಯ ಆರೋಪಿತರನ್ನು ವಿಚಾರಣೆಗೆ ಒಳಪಡಿಸಿದ್ದು, ಆರೋಪಿತರು ತಮ್ಮ ಹೇಳಿಕೆಯಲ್ಲಿ ಅಭಿಯೋಜನೆಯ ಸಾಕ್ಷಿಗಳು ಹೇಳಿರುವ ಸಾಕ್ಷ್ಯವು ಸುಳ್ಳು ಎಂದು ಹೇಳಿರುತ್ತಾರೆ. ಆದರೆ ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಲಿಖಿತ ಸಾಕ್ಷ್ಯವನ್ನಾಗಲಿ ಹಾಜರುಪಡಿಸಿರುವುದಿಲ್ಲ.

6. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು ಮತ್ತು ಕಡತಗಳನ್ನು ಪರಿಶಿಲಿಸಲಾಯಿತು.

7. ಈ ಮೇಲಿನ ಮೊಕದ್ದಮೆಯಲ್ಲಿ ನ್ಯಾಯಾಲಯವು ತೀರ್ಮಾನಿಸಬೇಕಾದ ಅಂಶಗಳು ಈ ಕೆಳಕಂಡಂತಿದೆ.

**ಅಂಶಗಳು**

1. ದಿನಾಂಕ 18-03-2022 ರಂದು ಮಧ್ಯರಾತ್ರಿ 02:00 ಗಂಟೆ ಸಮಯದಲ್ಲಿ ಜೇವರಗಿ ಪೊಲೀಸ ಠಾಣಾ ವ್ಯಾಪ್ತಿಯ, ಜೇವರ್ಗಿ ಪಟ್ಟಣದ ರದೇವಾಡಗಿ ಪೆಟ್ರೋಲ ಪಂಪ್ ಮುಂದುಗಡೆ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರು ಯಾವುದೇ ಪರವಾನಿಗೆ ಹಾಗೂ ಲೈಸೆನ್ಸನ್ನು ಪಡೆಯದೆ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಕಾರಣ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಾಯಾತೀತವಾಗಿ ರುಜುವಾತು ಪಡಿಸಿರುವುದೇ?

2. ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮದ್ಯ ತುಂಬಿದ ಪೌಚುಗಳನ್ನು ಮಾರಾಟ ಮಾಡಲು ಸಂಗ್ರಹಿಸಿ ತಮ್ಮ ಸ್ವಾಧೀನದಲ್ಲಿಟ್ಟುಕೊಂಡ ಕಾರಣ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಾಯಾತೀತವಾಗಿ ರುಜುವಾತು ಪಡಿಸಿರುವುದೇ?

3. ಯಾವ ಆದೇಶ?

8. ಮೇಲೆ ಹೇಳಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತೆ ಇರುತ್ತದೆ.

| | | |
|---|---|---|
| ಅಂಶ 1 | ಃ | ನಕಾರಾತ್ಮಕ |
| ಅಂಶ 2 | ಃ | ನಕಾರಾತ್ಮಕ |
| ಅಂಶ 3 | ಃ | ಅಂತಿಮ ಆದೇಶ ಈ ಕೆಳಕಂಡಂತೆ ಕಾರಣಗಳು. |

**ಕಾರಣಗಳು**

9. **ಅಂಶ-1 ಮತ್ತು 2 :** ಈ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿದ್ದು ಸಂದರ್ಭ ಮತ್ತು ಸನ್ನಿವೇಶಗಳನ್ನು ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಯಿತು.

10. ಅಭಿಯೋಜನೆಯ ಪ್ರಕರಣದ ಪ್ರಕಾರ ಜೇವರ್ಗಿ ಪೊಲೀಸ್ ಠಾಣೆಯ ಸರಹದ್ದಿಯ ಜೇವರಗಿ ಜೇವರ್ಗಿ ಪಟ್ಟಣದ ರದ್ದೇವಾಡಿ ಪೆಟ್ರೋಲ ಪಂಪ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ ದಿನಾಂಕ 18-03-2022 ರಂದು 02.00 ಎ.ಎಂ. ಗಂಟೆಯ ಸಮಯಕ್ಕೆ ಆರೋಪಿತನು 1 ನೇದ್ದವನು ಯಾವುದೇ ಅದೀಕೃತವಾಗಿ ಪರವಾನಿಗೆ ಇಲ್ಲದೆ 48 ಓರಿಜೀನಲ್ ಚ್ವಾಯಿಸ್ ವಿಸ್ಕಿ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ Original Choice Delexe Whisky ಅಂತಾ ಮತ್ತು ಅದರ ಪ್ರಮಾಣ 90 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.35.00 ಇರುತ್ತದೆ, 40 ಓರಿಜೀನಲ್ ಚ್ವಾಯಿಸ್ ವಿಸ್ಕಿ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ Original Choice Delexe Whisky ಅಂತಾ ಮತ್ತು ಅದರ ಪ್ರಮಾಣ 180 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.70.00 ಇರುತ್ತದೆ, 52 ಬ್ಯಾಗಪೇಪರ್ ವಿಸ್ಕಿ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ

Bagpiper Delex Whisky ಅಂತಾ ಮತ್ತು ಅದರ ಪ್ರಮಾಣ 90 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.68.00 ಇರುತ್ತದೆ, 30 ಬ್ಯಾಗಪೇಪರ್ ವಿಸ್ಕಿ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ Bagpiper Delex Whisky ಅಂತಾ ಮತ್ತು ಅದರ ಪ್ರಮಾಣ 180 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.106.00 ಇರುತ್ತದೆ, 40 ಎಮ್.ಸಿ. ಡುವೇಲ್ಸ ರಮ್ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ MC Dowells No.01, Rum ಅಂತಾ ಮತ್ತು ಅದರ ಪ್ರಮಾಣ 180 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.106.00 ಇರುತ್ತದೆ, 20 ಎಮ್.ಸಿ. ಡುವೇಲ್ಸ ವಿಸ್ಕಿ ಮದ್ಯ ತುಂಬಿದ ಪೌಚಗಳು ಪ್ರತಿಯೊಂದು ಪೌಚಿನ ಮೇಲೆ ಇಂಗ್ಲೀಷನಲ್ಲಿ MC Dowells No.01, Reserve Whishky Orginal ಅಂತಾ ಮತ್ತು ಅದರ ಪ್ರಮಾಣ 180 ಎಮ್.ಎಲ್. ಅಂತಾ ಬರೆದಿದ್ದು ಪ್ರತಿಯೊಂದ ಮದ್ಯ ತುಂಬಿದ ಪೌಚಿನ ಬೆಲೆ ರೂ.198.00 ಇರುತ್ತದೆ, 20 ಕಿಂಗ್ ಫೀಷರ್ ಸ್ಟ್ರಾಂಗ ಪ್ರೀಮಿಯಮ್ ಬೀಯರ್ ಮದ್ಯ ತುಂಬಿದ ಟಿನ್ನಗಳು ಇದ್ದು, ಪ್ರತಿಯೊಂದು ಬೀಯರ ಟೀನ ಮೇಲೆ ಇಂಗ್ಲೀಷನಲ್ಲಿ King Fisher Strong Premium Beer ಅಂತಾ ಮತ್ತು ಅದರ ಪ್ರಮಾಣ 500 ಎಮ್.ಎಲ್ ಅಂತಾ ಬರೆದಿದ್ದು, ಪ್ರತಿಯೊಂದ ಮದ್ಯ ತುಂಬಿದ ಬಾಟಲಿ ಬೆಲೆ ರೂ.198-00 ಮಧ್ಯವನ್ನು ಅನಧೀಕೃತವಾಗಿ ಮಾರಾಟ ಮಾಡುತ್ತಿದ್ದಾಗ ಚಾಸಾ.1, 3 ಮತ್ತು 4 ನೇದ್ದವರು ಚಾಸಾ.2 ಮತ್ತು 3 ನೇದ್ದವರ ಸಮಕ್ಷಮದಲ್ಲಿ ದಾಳಿ ಮಾಡಿ ಒಟ್ಟು 23,356/- ಕಿಮ್ಮತ್ತಿನ ಮಧ್ಯ ಜಪ್ತಿ ಪಡಿಸಿಕೊಂಡಿದ್ದು ಇರುತ್ತದೆ. 1 ನೇ ಆರೋಪಿಯ ಮಧ್ಯದ ಪೌಚಗಳನ್ನು 2 ನೇ ಆರೋಪಿಯು ತೆಗೆದುಕೊಂಡು ಬಂದು ಮಾರಾಟ ಮಾಡುತ್ತಿದ್ದ ಬಗ್ಗೆ

ತನಿಖೆಯಿಂದು ಕಂಡುಬಂದಿದ್ದು ಇರುತ್ತದೆ, ಈ ನಿಟ್ಟಿನಲ್ಲಿ ಅಭಿಯೋಜಕರು ಪ್ರಾಸಾ-1 ರಿಂದ 4 ರವರ ಸಾಕ್ಷಿ ವಿಚಾರಣೆ ಮಾಡಿಸಿ ನಿಪಿ-1 ರಿಂದ 3 ದಾಖಲೆಗಳನ್ನು ನಿಶಾನೆಕರಿಸಿಕೊಂಡಿರುತ್ತಾರೆ ಹಾಗೂ ಮುದ್ದೆ ಮಾಲು 1 ರಿಂದ 250 ನ್ನು ವಶಪಡಿಸಿಕೊಂಡಿರುತ್ತಾರೆ.

11. ಅಭಿಯೋಜನೆಯು ಚಾಸಾ-2 ಮತ್ತು ಚಾಸಾ-3 ರವರನ್ನು ಪ್ರಾಸಾ-1 ಮತ್ತು ಪ್ರಾಸಾ-2 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಜಪ್ತಿ ಪಂಚ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಪೋಲಿಸರು ತಮ್ಮ ಸಮಕ್ಷಮ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಮದ್ಯದ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ ಎಂದು ನುಡಿದಿರುತ್ತಾರೆ. ನಿಪಿ-1 ಜಪ್ತಿ ಪಂಚನಾಮೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದು ಪೋಲಿಸರು ನಿಪಿ-1 ದಾಖಲೆಯಲ್ಲಿ ಬರೆದಂತಹ ವಿಚಾರಗಳನ್ನು ತಮಗೆ ಓದಿ ಹೇಳಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿನ ಸಲಹೆಗಳನ್ನು ಸದರಿ ಸಾಕ್ಷಿದಾರರು ನಿರಾಕರಿಸಿರುತ್ತಾರೆ.

12. ಅಭಿಯೋಜನೆಯು ಚಾಸಾ-5 ರವರನ್ನು ಪ್ರಾಸಾ-3 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಪ್ರತ್ಯಕ್ಷ ಸಾಕ್ಷಿದಾರರು ಮತ್ತು ದಾಳಿಯಲ್ಲಿ ಬಾಗವಹಿಸಿದ ಪೊಲೀಸ್ ಸಿಬ್ಬಂದಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 17-03-2022 ರಂದು ರಾತ್ರಿ 11.00 ಗಂಟೆಗೆ ತಾವು ಠಾಣೆಯಲ್ಲಿದ್ದಾಗ ಚಾಸಾ.1 ರವರು ಮತ್ತು ಚಾಸಾ.4 ರವರ ಜೊತೆಗೆ ರಾತ್ರಿ ಗಸ್ತು ಮತ್ತು ಚೆಕಿಂಗ್ ಕರ್ತವ್ಯ ಕುರಿತು ತಮ್ಮ ಠಾಣೆಯ ಜೀಪ್ ನಂ.ಕೆಎ-

32 ಜಿ-0671 ನೇದ್ದರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ದಿನಾಂಕ 18-03-2022 ರಂದು ರಾತ್ರಿ 01.00 ಎ.ಎಂ. ಗೆ ಸಿಂದಗಿ ಕ್ರಾಸ್ ಹತ್ತಿರ ಇದ್ದಾಗ ಚಾಸಾ.1 ರವರು ಜೇವರ್ಗಿ ಪಟ್ಟಣದ ರದ್ದೆವಾಡಗಿ ಪೆಟ್ರೋಲ್ ಪಂಪ್ ಹತ್ತಿರದ ಸಾರ್ವಜನಿಕ ಸ್ಥಳದಲ್ಲಿ ರಮೇಶ ತೇಲ್ಲೂರ ಎಂಬ ವ್ಯಕ್ತಿಯು ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿದ್ದು ದಾಳಿಯ ಕಾಲಕ್ಕೆ ಜೊತೆಯಲ್ಲಿ ಇರಬೇಕು ಎಂದು ಚಾಸಾ.1 ರವರು ತಮಗೆ ತಿಳಿಸಿದರು ಎಂದು ನುಡಿದಿರುತ್ತಾರೆ. ನಂತರ 01.30 ಎ.ಎಂ. ಠಾಣೆಗೆ ಹೋಗಿ ಚಾಸಾ.2 ಮತ್ತು 3 ರವರನ್ನು ಪಂಚರಾಗಿ ಬರಮಾಡಿಕೊಂಡು ಅವರಿಗೆ ಬಾತ್ಮಿ ವಿಚಾರ ತಿಳಿಸಿ ಅವರು ಪಂಚರಾಗಲು ಒಪ್ಪಿ ಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ತಾವು ಠಾಣೆಯಿಂದ ರಾತ್ರಿ 01.30 ಎ.ಎಂ. ಗಂಟೆಗೆ ಜೀಪ್ ನಂ.ಕೆಎ-32 ಜಿ-0671 ನೇದ್ದರಲ್ಲಿ ಪಂಚರ ಜೊತೆಗೆ, ಚಾಸಾ.1 ಮತ್ತು 4 ರವರು ಘಟನಾ ಸ್ಥಳಕ್ಕೆ ಹೊರಟೆವು ಎಂದು ನುಡಿದಿರುತ್ತಾರೆ. ಜೇವರ್ಗಿ ಪಟ್ಟಣದ ಬಸ್ ಸ್ಟ್ಯಾಂಡ್ ಹತ್ತಿರ ರೆದ್ದವಾಡಗಿ ಪೆಟ್ರೋಲ್ ಪಂಪ್ ಹತ್ತಿರ ನಡೆದುಕೊಂಡು ಹೋಗಿ ಒಂದು ಗೋಡೆಯ ಮರೆಯಲ್ಲಿ ನಿಂತು ನೋಡಲಾಗಿ ರೆದ್ದವಾಡಗಿ ಪೆಟ್ರೋಲ್ ಪಂಪ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿಯು ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು ರಾತ್ರಿ 2 ಗಂಟೆಗೆ ದಾಳಿ ಮಾಡಿದಾಗ ಮದ್ಯವನ್ನು ಖರೀದಿ ಮಾಡುತ್ತಿದ್ದ ಜನರು ಮತ್ತು ಮಾರಾಟ ಮಾಡುತ್ತಿದ್ದ ವ್ಯಕ್ತಿಯು ಅಲ್ಲಿಂದ ಓಡಿಹೋದರು ಎಂದು ನುಡಿದಿರುತ್ತಾರೆ. ಆಗ ಚಾಸಾ.1, 4 ಮತ್ತು ತಾನು ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿದು ಚಾಸಾ.1 ರವರು ವಿಚಾರಿಸಲಾಗಿ ಅವನ ಹೆಸರು ರಮೇಶ ತೇಲ್ಲೂರ ಅಂತಾ ತಿಳಿಸಿದ್ದು ಅವನ ಹತ್ತಿರ ಮದ್ಯ ಮಾರಾಟ ಮಾಡಲು ಯಾವುದೇ ಪರವಾನಿಗೆ ಇರಲಿಲ್ಲ ಎಂದು ನುಡಿದಿರುತ್ತಾರೆ. ಪಂಚರ ಸಮಕ್ಷಮ ಮದ್ಯದ ಪೌಚುಗಳನ್ನು ಪರಿಶೀಲನೆ ಮಾಡಲಾಗಿ

48 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಪೌಚುಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಒಂದು ಪೌಚನ ಮುಖಬೆಲೆಯು ರೂ.35/- ಇತ್ತು ಎಂದು ನುಡಿದಿರುತ್ತಾರೆ. 180 ಎಂ.ಎಲ್.ನ 40 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಪೌಚುಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ಪೌಚನ ಮುಖಬೆಲೆಯು ರೂ.70/- ಇತ್ತು ಎಂದು ನುಡಿದಿರುತ್ತಾರೆ. 90 ಎಂ.ಎಲ್.ನ 52 ವಿಸ್ಕಿಯ ಪೌಚುಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ, ಅವುಗಳ ಮುಖ ಬೆಲೆಯು ರೂ.68/- ಎಂದು ನುಡಿದಿರುತ್ತಾರೆ. 180 ಎಂ.ಎಲ್.ನ 30 ವಿಸ್ಕಿಯ ಪೌಚುಗಳು, 90 ಎಂ.ಎಲ್.ನ 40 ರಮ್, 180 ಎಂ.ಎಲ್.ನ 20 ರಮ್, 500 ಎಂ.ಎಲ್.ನ 20 ಕಿಂಗ್ ಫಿಷರ್ ಸ್ಟ್ರಾಂಗ್ ಪ್ರೀಮಿಯಂ ಟಿನ್ ಜಪ್ತಿಪಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಎಲ್ಲಾ ಪೌಚುಗಳನ್ನು ಹಾಗೂ ಟಿನ್ ಗಳನ್ನು ಬಿಳಿ ಬಟ್ಟೆಯಲ್ಲಿ ಸೀಲ್ ಮಾಡಿ ಅವುಗಳ ಮೇಲೆ 'ಅ' ಎಂಬ ಅಕ್ಷರವನ್ನು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಮುದ್ದೆಮಾಲು ಮತ್ತು ಆರೋಪಿಯನ್ನು ಮುಂದಿನ ಕ್ರಮಕ್ಕಾಗಿ ಎಸ್.ಎಚ್.ಓ ರವರಿಗೆ ಒಪ್ಪಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಈ ಕುರಿತು ತಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

13. ಫ್ರಾಸಾ.3 ರವರು ಆರೋಪಿತರ ಪರ ಪಾಟೀ ಸಾವಾಲಿನಲ್ಲಿ ತಾವು ಯಾವ ಗೋಡೆಯ ಮರೆಯಲ್ಲಿ ನಿಂತು ನೋಡಿರುತ್ತೀರಿ ಎಂದರೆ ಯಾವ ಗೋಡೆ ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾಳಿ ಮಾಡುವ ಸಮಯದಲ್ಲಿ ಅಲ್ಲಿ ಎಷ್ಟು ಜನರಿದ್ದರು ಎಂದರೆ 5-6 ಜನರು ಇದ್ದರು ಎಂದು ನುಡಿದಿರುತ್ತಾರೆ. ಸದರಿ ಮುದ್ದೆಮಾಲುಗಳನ್ನು ಜಪ್ತಿಪಡಿಸಿಕೊಳ್ಳುವ ಸಮಯದಲ್ಲಿ ಹಣ ಏನಾದರೂ ಸಿಕ್ಕಿತಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ.

14. ಅಭಿಯೋಜನೆಯು ಚಾಸಾ-1 ರವರನ್ನು ಪ್ರಾಸಾ-4 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಪೀರ್ಯಾದಿದಾರರು ಆಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 17-03-2022 ರಂದು ರಾತ್ರಿ 11.00 ಗಂಟೆ ಸುಮಾರಿಗೆ ರಾತ್ರಿ ಗಸ್ತು ಕರ್ತವ್ಯ ಕುರಿತು ಠಾಣಾ ಸಿಬ್ಬಂದಿಯಾದ ಚಾಸಾ.4 ಮತ್ತು 5 ರವರನ್ನು ಠಾಣಾ ಜೀಪ್ ನಂ.ಕೆಎ-32 ಜಿ-671 ನೇದ್ದರಲ್ಲಿ ಚೆಕಿಂಗ್ ಕುರಿತು ಠಾಣೆಯಿಂದ ಹೊರಟಿದ್ದೆವು ಎಂದು ನುಡಿದಿರುತ್ತಾರೆ. ದಿನಾಂಕ 18-03-2022 ರಂದು ಮಧ್ಯರಾತ್ರಿ 1.00 ಗಂಟೆಗೆ ಸಿಂದಗಿ ಕ್ರಾಸ್ ಹತ್ತಿರ ಇದ್ದಾಗ ಜೇವರ್ಗಿ ಪಟ್ಟಣದ ರದ್ದೆವಾಡಗಿ ಪೆಟ್ರೋಲ್ ಬಂಕ್ ಹತ್ತಿರ ರಮೇಶ ತೇಲ್ಲೂರ ಎನ್ನುವವರು ಅನಧಿಕೃತವಾಗಿ ಮದ್ಯದ ಪೌಚುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆ ಎಂದು ಬಾತಿ ಬಾತ್ಮಿ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಬಾತ್ಮಿ ವಿಷಯವನ್ನು ಚಾಸಾ.4 ಮತ್ತು 5 ರವರಿಗೆ ತಿಳಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಚಾಸಾ.4 ಮತ್ತು 5 ರವರಿಗೆ ಪಂಚರನ್ನು ಕರೆಯಿಸಲು ಕಳುಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಚಾಸಾ.4 ಮತ್ತು 5 ರವರು ಇಬ್ಬರು ಪಂಚರಾದ ಚಾಸಾ.2 ಮತ್ತು 3 ರವರನ್ನು ಕಡೆದುಕೊಂಡು ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಬಾತ್ಮಿ ಬಂದ ವಿಷಯವನ್ನು ತಿಳಿಸಿದಾಗ ಅವರು ಪಂಚರಾಗಲು ಒಪ್ಪಿ ಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಂತರ ಮೇಲಾಧಿಕಾರಿಗಳಿಗೆ ದಾಳಿ ಮಾಡಲು ಹೋಗುವ ವಿಷಯ ತಿಳಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನಂತರ ಮದ್ಯ ರಾತ್ರಿ 1.30 ಗಂಟೆಗೆ ದಾಳಿ ಮಾಡುವ ಕುರಿತು ಬಾತ್ಮಿ ಬಂದ ಸ್ಥಳದ ಕಡೆಗೆ ಹೊರಟೆವು ಎಂದು ನುಡಿದಿರುತ್ತಾರೆ. ಮದ್ಯ ರಾತ್ರಿ 2.00 ಗಂಟೆಗೆ ಜೇವರ್ಗಿ ಪಟ್ಟಣದ ಬಸ್ ನಿಲ್ದಾಣದ ಹತ್ತಿರ ಜೀಪನ್ನು ನಿಲ್ಲಿಸಿ ಪಂಚರು ಹಾಗೂ ಸಿಬ್ಬಂದಿಯೊಂದಿಗೆ ನಡೆದುಕೊಂಡು ಹೋದೆವು ಎಂದು ನುಡಿದಿರುತ್ತಾರೆ. ಬಾತ್ಮಿ ಬಂದ ಸ್ಥಳದಲ್ಲಿ ಲೈಟಿನ ಬೆಳಕಿನಲ್ಲಿ ಅಕ್ರಮವಾಗಿ ಮದ್ಯದ

ಪೌಚುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದನು ಎಂದು ನುಡಿದಿರುತ್ತಾರೆ. ಅದನ್ನು ಖಚಿತಪಡಿಸಿಕೊಂಡು ಚಾಸಾ.2 ರಿಂದ 4 ರವರೊಂದಿಗೆ ದಾಳಿ ಮಾಡಿದೆವು ಎಂದು ನುಡಿದಿರುತ್ತಾರೆ. ದಾಳಿ ಮಾಡಿದಾಗ ಮದ್ಯವನ್ನು ಖರೀದಿಸಲು ಬಂದಿದ್ದವರು ಓಡಿಹೋದರು ಎಂದು ನುಡಿದಿರುತ್ತಾರೆ. ಮದ್ಯ ಮಾರಾಟ ಮಾಡುತ್ತಿದ್ದವನು ಓಡಿಹೋದನು ಆತನನ್ನು ಬೆನ್ನತ್ತಿ ಹಿಡಿದು ಹೆಸರು ಮತ್ತು ವಿಳಾಸ ಕೇಳಲಾಗಿ ಆತ ತನ್ನ ಹೆಸರು ರಮೇಶ ತೇಲ್ಲೂರ ಎಂದು ತಿಳಿಸಿದನು ಎಂದು ನುಡಿದಿರುತ್ತಾರೆ. ಸದರಿ ಮದ್ಯದ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ಆತ ತನ್ನ ಹತ್ತಿರ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿ ಸದರಿ ಮದ್ಯದ ಪೌಚುಗಳನ್ನು ಶಿವರಾಜ ಗುತ್ತೆದಾರರವರಿಂದ ತಂದಿದ್ದೇನೆ ಎಂದು ತಿಳಿಸಿರುತ್ತಾನೆ ಎಂದು ನುಡಿದಿರುತ್ತಾರೆ. ಪಂಚರ ಸಮಕ್ಷಮ ಮದ್ಯದ ಪೌಚುಗಳನ್ನು ಪರಿಶೀಲನೆ ಮಾಡಿದೆವು ಎಂದು ನುಡಿದಿರುತ್ತಾರೆ. 90 ಎಂ.ಎಲ್.ನ ಓರಿಜಿನಲ್ ಚಾಯ್ಸ್ ವಿಸ್ಕಿಯ 48 ಮದ್ಯದ ಪೌಚುಗಳು, 180 ಎಂ.ಎಲ್.ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 40 ಮದ್ಯದ ಪೌಚುಗಳು, 90 ಎಂ.ಎಲ್.ನ ಬ್ಯಾಗ್ ಪೈಪರ್ 52 ಮದ್ಯದ ಪೌಚುಗಳು, 180 ಎಂ.ಎಲ್.ನ ಬ್ಯಾಗ್ ಪೈಪರ್ 30 ಮದ್ಯದ ಪೌಚುಗಳು, 180 ಎಂ.ಎಲ್.ನ ಎಂ.ಸಿ.ಡಾವೆಲ್ಸ್ ಕಂಪನಿಯ 40 ರಮ್ ನ ಪೌಚುಗಳು, 180 ಎಂ.ಎಲ್.ನ ಎಂ.ಸಿ.ಡಾವೆಲ್ಸ್ ಕಂಪನಿಯ 20 ವಿಸ್ಕಿಯ ಪೌಚುಗಳು, 500 ಎಂ.ಎಲ್.ನ ಕಿಂಗಫಿಷರ್ 20 ಟಿನ್ನುಗಳು ಇದ್ದವು ಅವುಗಳ ಒಟ್ಟು ಬೆಲೆ 23,356/- ಇತ್ತು ಎಂದು ನುಡಿದಿರುತ್ತಾರೆ. ಸದರಿ ಪೌಚುಗಳನ್ನು ಹಾಗೂ ಟಿನ್ನುಗಳನ್ನು ಜಪ್ತಿ ಮಾಡಿ ಬಿಳಿ ಬಟ್ಟೆಯಲ್ಲಿ ಸುತ್ತಿ ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಪಂಚನಾಮೆಯನ್ನು ಮದ್ಯರಾತ್ರಿ 2 ಗಂಟೆಯಿಂದ 3 ಗಂಟೆವರೆಗೆ ಚಾರ್ಜರ್ ಬೆಳಕಿನಲ್ಲಿ ಜರುಗಿಸಿರುತ್ತೇನೆ ಎಂದು ನುಡಿದಿರುತ್ತಾರೆ.

15. ಪ್ರಾಸಾ.4 ರವರು ಆರೋಪಿತರ ಪರ ಪಾಟೀ ಸವಾಲಿನಲ್ಲಿ ಮದ್ಯದ ಪೌಚುಗಳು ಯಾವ ಇಸವಿಗೆ ಮತ್ತು ಯಾವ ಬ್ಯಾಚಿಗೆ ಸಂಬಂಧಪಟ್ಟಿವೆ ಎಂದು ತಮ್ಮ ದೂರಿನಲ್ಲಿ ಬರೆದಿದ್ದೀರಾ ಎಂದರೆ ಬರೆದಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯದ ಮುಂದಿರುವಂತಹ ಪೌಚುಗಳನ್ನು ಸಾಕಷ್ಟು ಪ್ರಕರಣಗಳಲ್ಲಿ ಜಪ್ತಿಪಡಿಸಿಕೊಂಡಿರುತ್ತೀರಿ ಎಂದರೆ ಜಪ್ತಿಪಡಿಸಿಕೊಂಡ ನಂತರ ಎಫ್.ಎಸ್.ಎಲ್ ಗಾಗಿ ಕಳುಹಿಸಿಕೊಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ರದ್ದೆವಾಡಗಿ ಪೆಟ್ರೋಲ್ ಬಂಕ್ ಹತ್ತಿರ ಸಾಕಷ್ಟು ಜನರು ಇರುತ್ತಾರೆ ಎನ್ನುವುದನ್ನು ಒಪ್ಪಿಕೊಂಡಿರುತ್ತಾರೆ. ಪಂಚರನ್ನು ಬಿಟ್ಟು ಬೇರೆ ವ್ಯಕ್ತಿಗಳನ್ನು ಪಂಚನಾಮೆಗೆ ಸಹಿ ಮಾಡಲು ಕೇಳಿದ್ದೀರಾ ಎಂದರೆ ಕೇಳಿದ್ದೇನೆ ಆದರೆ ಅವರು ನಿರಾಕರಿಸಿರುತ್ತಾರೆ ಎಂದು ನುಡಿದಿರುತ್ತಾರೆ.

16. ಒಟ್ಟಾರೆಯಾಗಿ ಈ ಪ್ರಕರಣದಲ್ಲಿ ಲಭ್ಯವಿರುವ ಸಾಕ್ಷಿ ಪುರಾವೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಈ ಪ್ರಕರಣದಲ್ಲಿ ಜಪ್ತಿ ಪಂಚ ಸಾಕ್ಷಿದಾರರಾದ ಪ್ರಾಸಾ.1 ಮತ್ತು ಪ್ರಾಸಾ.2 ರವರು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಬಕಾರಿ ಪ್ರಕರಣಗಳಲ್ಲಿ ಜಪ್ತಿ ಪಂಚನಾಮೆಯನ್ನು ರುಜುವಾತುಪಡಿಸುವುದು ತುಂಬ ಅವಶ್ಯಕ ಹಾಗೂ ಪ್ರಮುಖ ಆಗಿರುತ್ತದೆ ಮತ್ತು ಜಪ್ತಿ ಮಾಡಿಕೊಂಡ ಮುದ್ದೆ ಮಾಲುಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸುವುದು ಅಭಿಯೋಜನೆಯವರ ಹೊಣೆಯಾಗಿರುತ್ತದೆ. ಆದರೆ, ಈ ಪ್ರಕರಣದಲ್ಲಿ ಪ್ರಾಸಾ.1 ಮತ್ತು ಪ್ರಾಸಾ.2 ಜಪ್ತಿ ಪಂಚ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದೇ ಪ್ರತಿಕೂಲ ಸಾಕ್ಷಿಯಾಗಿ ಪರಿಣಮಿಸಿರುತ್ತಾರೆ. ಆದ್ದರಿಂದ, ಫಿರ್ಯಾದಿದಾರ ಚಾಸಾ.1 ರವರು ಗುನ್ನಾ ಸ್ಥಳದಿಂದ ಅಕ್ರಮವಾಗಿ ಮದ್ಯ ತುಂಬಿದ ಪೌಚುಗಳನ್ನು ಪ್ರಾಸಾ.1 ಮತ್ತು ಪ್ರಾಸಾ.2 ರವರ ಸಮಕ್ಷಮ ಜಪ್ತಿ ಪಂಚನಾಮೆ ಮೂಲಕ ವಶಪಡಿಸಿಕೊಂಡಿರುತ್ತಾರೆ

ಅಥವಾ ಇಲ್ಲವೋ ಎನ್ನುವ ಬಗ್ಗೆ ಸಂಶಯ ಉಂಟಾಗುತ್ತದೆ. ಆದ್ದರಿಂದ, ಈ ಪ್ರಕರಣದಲ್ಲಿ ಜಪ್ತಿ ಪಂಚನಾಮೆಯನ್ನು ರುಜುವಾತು ಪಡಿಸುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ, ಈ ಪ್ರಕರಣದಲ್ಲಿ ಮದ್ಯ ತುಂಬಿದ ಪೌಚುಗಳನ್ನು ಹಾಗೂ ಬಾಟಲಿಗಳನ್ನು ಆರೋಪಿತರಿಂದ ವಶದಿಂದ ಜಪ್ತಿ ಮಾಡಿಕೊಂಡಿರುವುದಾಗಿ ಫಿರ್ಯಾದಿದಾರರು ಪ್ರಾಸಾ.4 ಹೇಳಿದ್ದರೂ ಸಹಃ ಪಂಚ ಸಾಕ್ಷಿದಾರರರಾದ ಪ್ರಾಸಾ.1 ಮತ್ತು ಪ್ರಾಸಾ.2 ರವರು ತಮ್ಮ ಸಾಕ್ಷ್ಯದಲ್ಲಿ ತಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಪೊಲೀಸರು ತಮ್ಮ ಸಮಕ್ಷಮ ಮದ್ಯದ ಪೌಚಗಳನ್ನು ಹಾಗೂ ಬಾಟಲಿಗಳನ್ನು ವಶಪಡಿಸಿಕೊಂಡಿಲ್ಲ ಎಂದು ನುಡಿದಿರುತ್ತಾರೆ. **AIR 2011 SC 73 Varun Choudhary V/s State of Rajasthan** ರ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನಲ್ಲಿ ಹೇಳಲಾದ ತತ್ವದ ಮೇರೆಗೆ ಜಪ್ತಿ ಪಂಚನಾಮೆಯನ್ನು ರುಜುವಾತು ಪಡಿಸುವಲ್ಲಿ ಪ್ರತ್ಯಕ್ಷ ಮತ್ತು ಜಪ್ತಿ ಪಂಚನಾಮೆಯ ಪಂಚರು ಅಭಿಯೋಜನೆಯ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನೀಡಬೇಕಾಗುತ್ತದೆ. ಅಬಕಾರಿ ದಾಳಿಯಲ್ಲಿ ಭಾಗಿಯಾದ ಪಂಚ ಸಾಕ್ಷಿದಾರರಾದ ಪ್ರಾಸಾ.1 ಮತ್ತು ಪ್ರಾಸಾ.2 ರವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಆದ್ದರಿಂದ ಜಪ್ತಿ ಪಂಚನಾಮೆಯನ್ನು ರುಜುವಾತು ಪಡಿಸುವ ಹೊಣೆ ಅಭಿಯೋಜನೆಯವರ ಮೇಲೆ ಇರುತ್ತದೆ. ಆದ್ದರಿಂದ ಜಪ್ತಿ ಪಂಚನಾಮೆ ನಿ.ಪಿ.1 ಕಾನೂನು ಮಾನ್ಯತೆಯನ್ನು ಕಳೆದುಕೊಂಡಂತ್ತಾಗುತ್ತದೆ. ಜಪ್ತಿ ಪಂಚನಾಮೆಯನ್ನು ರುಜುವಾತು ಪಡಿಸಲು ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದ್ದರಿಂದ ಈ ಪ್ರಕರಣದ ಆರೋಪಿತರನ್ನು ದೋಷಿ ಎಂದು ನಿರ್ಣಯಿಸಲು ಯಾವುದೇ ಪೂರಕ ಮತ್ತು ಬಲವಾದ ಸಾಕ್ಷಾಧಾರಗಳು ಇರುವುದಿಲ್ಲ. ಆದ್ದರಿಂದ, ಆರೋಪಿತರನ್ನು ಅಪರಾಧ

ಮಾಡಿರುತ್ತಾನೆಯೋ ಅಥವಾ ಇಲ್ಲವೋ ಎನ್ನುವದು ಸಂಶಯ ಉಂಟಾಗುತ್ತದೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ, ಆರೋಪಿತರನ್ನು ಆಪಾದನೆಯಿಂದ ಮುಕ್ತಿಗೊಳಿಸಲು ಹಾಗೂ ಬಿಡುಗಡೆಗೊಳಿಸಲು ಅರ್ಹರಾಗಿರುತ್ತಾರೆ. ಆದುದರಿಂದ **ಅಂಶ 1 ಮತ್ತು 2 ಕ್ಕೆ ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

17. **ಅಂಶ-3 ಕ್ಕೆ:** ಅಂಶ-1 ಮತ್ತು 2 ಕ್ಕೆ ಸಂಬಂಧಪಟ್ಟಂತೆ ಮಾಡಿರುವ ಚರ್ಚೆಯಿಂದ ಆರೋಪಿತರನ್ನು ಅನುಮಾನದ ಲಾಭವನ್ನು ಪಡೆದು ಬಿಡುಗಡೆ ಹೊಂದಲು ಅರ್ಹರಿರುತ್ತಾರೆ ಎಂದು ಅಭಿಪ್ರಾಯಪಡಲಾಗಿದೆ. ಆದುದರಿಂದ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**ಆದೇಶ**

ದಂ.ಪ್ರ.ಸಂ. ಕಲಂ.248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರ ಅಡಿಯಲ್ಲಿನ ಮಾಡಿರುವ ಅಪಾದನೆಗಳಿಂದ ನಿರ್ದೋಷಿತರೆಂದು ಘೋಷಿಸಿ ಸದರಿ ಆರೋಪಗಳಿಂದ ದೋಷಮುಕ್ತರನ್ನಾಗಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತರ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು 06 ತಿಂಗಳ ನಂತರ ರದ್ದು ಪಡಿಸಲು ಆದೇಶಿಸಲಾಗಿದೆ.

ಮು.ಮಾ.1 ರಿಂದ ಮು.ಮಾ.250, 90 ಎಮ್.ಎಲ್.ನ 48 ಓರಿಜೀನಲ್ ಚ್ವಾಯಿಸ್ ವಿಸ್ಕಿ ಮದ್ಯ ತುಂಬಿದ ಪೌಚಗಳು, 180 ಎಮ್.ಎಲ್.ನ 40 ಓರಿಜೀನಲ್ ಚ್ವಾಯಿಸ್ ವಿಸ್ಕಿ ಮದ್ಯ ತುಂಬಿದ ಪೌಚಗಳು, 90 ಎಮ್.ಎಲ್.ನ 52 ಬ್ಯಾಗಪೇಪರ್ ವಿಸ್ಕಿ ಮದ್ಯ ತುಂಬಿದ

ಪೌಚಗಳು, 180 ಎಮ್.ಎಲ್.ನ 30 ಬ್ಯಾಗಪೇಪರ್ ವಿಸ್ಕಿ ಮದ್ಯ ತುಂಬಿದ ಪೌಚಗಳು, 180 ಎಮ್.ಎಲ್,ನ 40 ಎಮ್.ಸಿ. ಡುಬೇಲ ರಮ್, ಮದ್ಯ ತುಂಬಿದ ಪೌಚಗಳು, 180 ಎಮ್.ಎಲ್.ನ 40 ಎಮ್.ಸಿ. ಡುವೇಲ್ಸ ರಮ್, 180 ಎಮ್.ಎಲ್.ನ 20 ಡುವೇಲ್ಸ ವಿಸ್ಕಿ ಮತ್ತು 500 ಎಮ್.ಎಲ್.ನ 20 ಕಿಂಗ್ ಫೀಷರ್ ಸ್ಟ್ರಾಂಗ ಪ್ರೀಮಿಯಮ್ ಬೀಯರಗಳಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ಅವುಗಳನ್ನು ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದನ್ನು ನಾನು ಓದಿ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 15 ನೇ ಏಪ್ರಿಲ್ ಮಾಹೆಯ 2026 ರಂದು ನನ್ನಿಂದ ಘೋಷಿಸಲಾಯಿತು).

**(ಶ್ರೀಮತಿ ತಯ್ಯಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಜೇವರಗಿ.

**<u>ಅನುಬಂಧ</u>**

**<u>ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ:</u>**

| | |
|---|---|
| ಪ್ರಾಸಾ 1 | : ಮಹೇಶ ತಂದೆ ಸಂಗಪ್ಪ. |
| ಪ್ರಾಸಾ 2 | : ಮಲ್ಲಿಕಾರ್ಜುನ ತಂದೆ ನಾಗೇಂದ್ರ. |
| ಪ್ರಾಸಾ 3 | : ಬಸಣ್ಣಗೌಡ ತಂದೆ ದೇವಿಂದ್ರಪ್ಪ. |
| ಪ್ರಾಸಾ 4 | : ಸಂಗಮೇಶ ಅಂಗಡಿ ತಂದೆ ಗುರುಪ್ಪ. |

**<u>ಅಭಿಯೋಜನೆ ಪರ ನಿಷಾನೆ ಮಾಡಲಾದ ದಾಖಲೆಗಳ ಪಟ್ಟಿ:</u>**

| | |
|---|---|
| ನಿಪಿ-1 | : ಜಪ್ತಿ ಪಂಚನಾಮೆ |
| ನಿಪಿ-1(ಎ) | : ಪ್ರಾಸಾ-1 ರವರ ಸಹಿ. |
| ನಿಪಿ-1(ಬಿ) | : ಪ್ರಾಸಾ-2 ರವರ ಸಹಿ. |
| ನಿಪಿ-1(ಸಿ) | : ಪ್ರಾಸಾ-4 ರವರ ಸಹಿ. |
| ನಿಪಿ-2 | : ರಾಸಾಯನಿಕ ಪರೀಕ್ಷಾ ವರದಿ. |
| ನಿಪಿ-3 | : ದೂರು. |
| ನಿಪಿ-3(ಎ) | : ಪ್ರಾಸಾ-4 ರವರ ಸಹಿ. |

**<u>ಅಭಿಯೋಜನೆ ಪರ ನಿಷಾನೆ ಮಾಡಲಾದ ಮುದ್ದೇ ಮಾಲುಗಳ ಪಟ್ಟಿ:</u>**

ಮು.ಮಾ.1 ರಿಂದ 250 : ಮದ್ಯ ತುಂಬಿದ ಪೌಚಗಳು.

**<u>ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ:</u>**

-ಇಲ್ಲಾ -

**<u>ಆರೋಪಿತರ ಪರ ನಿಷಾನೆ ಮಾಡಲಾದ ದಾಖಲೆಗಳ ಪಟ್ಟಿ:</u>**

-ಇಲ್ಲ-

**(ಶ್ರೀಮತಿ ತಯ್ಯಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಜೇವರಗಿ.